ಪ ರ ತು ಗ ಳು .

1. ಸಂದಲ್, ಅಳಲೆ, ಹುಣಸೆ, ಜಾಲಾರಿ ಗಿಡಗಳು, ಎಕರೆ ಬಂದಕ್ಕೆ ಸರಾಸರಿ 40ರ ಕಿಂತ ಜಾಸ್ತಿ ಇಲ್ಲದೆ ಗುತ್ತು ಮಾಡಿರುವ ಮತ್ತು ಸೊಪ್ಪಿಗಳು ಅಂದರೆ ಸುತ್ತು ಅಳತೆ ಬಂದು ಅಡಿ ಬಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಯಲ್ಲಾ ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಕತರಾಯಿಸಬೇಕು.

2. ಸೌದೆಯನ್ನು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉರಪತಿ ಉಂಟು ದರೆ, ಕಂಟ್ರಾಕ್ಟದಾರನು ಡಿ॥ ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಲುಕ್ಸಾನ್ ವೊಬಲಗನ್ನು ಸರಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಶೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಅಂದರೆ ಬ್ಯಾಲ ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಿಸೆ, ಅಳಲೆ ಇವೇ ಮೊದಲಾದ ಯಾವದೂ ಹರಾಜಿಗೆ ಶೇರಿ ಇಲ್ಲ ಉಳಿತು ಕೊಂಡಿರುವ ಸಂದಲ್ ಅಳಲೆ ಹುಣಸೆ ಗುರ್ತಿಗೋಸ್ಕರ ಬಿಟ್ಟಿರುವ ಮರಗಳ ವಿನಹಾ ಕಡಿಯಬಹುದಾದ ಇನ್ಯಾವ ಮರಗಳನ್ನು ಆದರೂ ಮನ್ನಾ ನೆಯಾಗಿ ಕಡದರೆ ಅಂಥಾದ್ದೆಲ್ಲಾ ಇಲಾಖಾ ಮೂರಿಫತ್ತು ಕಾಲ್ಸ್ ಮಾಡಿಸಿ ತಗಲುವ ಲಾಗವಡನ್ನು 50 ರೂಪಾಯಿನ ಸೆಕ್ಯೂರಿಟಿ ಹಣದಿಂದ ವಸೂಲ್ಮಾಡುತ್ತೆ.

4. ಸೌದೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಇಸವಿ ಜುಲೈ ಆಖೈರುವಳಗಾಗಿ ಪೂರೈಸಿಕೊಳ್ಳಬೇಕು. ಹಾಗೆ ಮಾಡದೆ ಇದ್ದರೆ ಕಂಟ್ರಾಕ್ಟುದಾರನು ಪಾವತಿ ಮಾಡಿರುವ ವೊಬಲಗನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಸೌದೆ ಕತರಾವಣಿ ವ ಸಾಗಿಸತಕ್ಕ ಹಕ್ಕು ದಾರಿಯು ಸಹಾ ಆ ತಾರೀಖಿನಿಂದ ರದ್ದು ಆಗಿರುತ್ತೆ.

5. ಕಂಟ್ರಾಕ್ಟುದಾರ ಖಾಯಿಷ್ಮಾಡುವ ಸೌದೆ ವೊತ್ತಕ್ಕೆ ತೇದಾದು ಆದ ದರ ಗಾಡಿ ಬೋಜಾ ಬಂದಕ್ಕೆ 5½ ಸಲೆ ಅಡಿ ಅಥವಾ ಟರ್ ಬಂದಕ್ಕೆ 6ರ ಸಲೆ ಅಡಿ ಈ ಮೇರೆ ಹಾಸಲ್ ಯಾ ತೀರ್ವೆ ವೊಬಲಗು ಪಾವತಿ ಮಾಡಿದ ನಂತರ ರೇಂಜ್ ಫಾರೆಸ್ಟ್ ಆ ಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸ್ ಕೊಡುತ್ತಾರೆ. ರೂಢಿಸಿದ ಬಾಬು ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿರುವ ಫಾರೆಸ್ಟ್ ನೌಕರನು ರಹದಾರಿ ಕೊಡುತ್ತಾನೆ.

6. ಕೂಪ್ ಯಾ ಕಂಪಾರ್ಟುಮೆಂಟಿನಿಂದ ಸೌದೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತರಾವಣಿ ಕೆಲಸಕ್ಕಾಗಿ ಕೊಟ್ಟು ಇರುವ ಕೂಪಿನಲ್ಲಿ ಆಗಲಿ ಅಥವಾ ಸೌದೆ ಗಾಡಿ ಮಾರ್ಗಗಳಲ್ಲಿ ಆಗಲಿ ಬೇಸಿಗೆ ಕಾಲದಲ್ಲಿ ಅಂದರೆ 1903ನೇ ಫಿಬ್ರವರಿ 1ರ ಲಾಗಾಯಿತು 1903ನೇ ಮೇ 31ರ ವರಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟುದಾರನ ಅಥವಾ ಆತನ ಕಡೆ ಜನರು ಅಜಾಗ್ರತೆಯಿಂದ ವುಂಟಾದ್ದೆಂದು ಡಿ॥ ಫಾರೆಸ್ಟ್ ಆಫಿಸರವರಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ ಮಾಡಬೇಕು.

7. ಕಂಟ್ರಾಕ್ಟುದಾರನ ಕಡೆ ಗಾಡಿಯವರು ರೈಲ್ವೆ ಸ್ಟೇರ್ಷಗೆ ಬರುವಾಗ್ಯೆ ಸ್ಟೇಟು ಯಾ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹಿತಿ ಸೌದೆಯನ್ನು ಕಡಿದ್ದೇ ಆಗಲಿ ಅಥವಾ ಕಡದು ರಫ್ತು ಮಾಡುವದೇ ಆಗಲಿ ಕಂಡುಬಂದಲ್ಲಿ ಅಂಥಾವರನ್ನು ಫಾರೆಸ್ಟ್ ರೆಗ್ಯುಲೇರ್ಷ ಪ್ರಕಾರ ಪ್ರಾಸಿಕ್ಯೂರ್ಷಗೆ ಗುರಿಮಾಡಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್ಸ.

ಕೋಲಾರ ಡಿಸ್ಟ್ರಿಕ್ಟು.

ಇಸ್ತಹಾರ್ನಾಮೆ, ತಾರೀಖು 12ನೇ ಫೆಬ್ರವರಿ 1903.

ಕೋಲಾರ ತಾಲ್ಲೂಕಿಗೆ ಶೇರಿದ ಜೋಡಿ ಜಂಬಾಪುರ ಮತ್ತು ಜೋಡಿ ಹಾವಳಿಗವ್ವಡನ ಹೊಸೂರು ಗ್ರಾಮಗಳು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಆಮಿಲರವರ ಕಛೇರಿಯಲ್ಲಿ 1903ನೇ ಇಸವಿ ಏಪ್ರೆಲ್ 2ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1902ನೇ ಮಾರ್ಚಿಂ 7ನೇ ನಂಬರಿನ ಮೈಸೂರ ಗೆಜೆಟ್ಟಿನ 2ನೇ ಭಾಗದ 67ನೇ ನಂಬರ್ ಪೇಜು ನೋಡತಕ್ಕದ್ದು.

ಎಸ್. ಅಮೀರ್ ಹಸೇನ್,
ಆಕ್ಟಿಂಗ್ ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜ್ಸರವರ ಕೋರ್ಟಿನಲ್ಲಿ.

ಸ್ರ 1902—1903ನೇ ಇಸವಿ ಅರ್ಜೀ ನಂಬರ್ 216.

ಅರ್ಜೀದಾರ ನಂಜನಗೂಡು ತಾಲ್ಲೂಕು ಕಳಲೆ ಗ್ರಾಮದಲ್ಲಿರುವ ಮೃತಪಟ್ಟ ಗಿರಿಕಿಟ್ಟಿ ಮಗ ನಂಜಪ್ಪ, ಮೈನರ್ ಗಾರ್ಡಿಯ್ ಚಿಕ್ಕಪ್ಪ ಹೊನ್ನಪ್ಪ, ಮೈನರಾದ ಕಳಲೆ ಸ್ಥಳದ ಗಿರಿಕಿಟ್ಟಿ ಮಗ ನಂಜಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ನಂಜಪ್ಪನಿಗೆ ಚಿಕ್ಕಪ್ಪನು ಆಗಬೇಕೆಂಬ ಹಕ್ಕಿನ ಮೇಲೆ ಕಳಲೆ ಸ್ಥಳದ ಹೊನ್ನಪ್ಪನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ರ 1903ನೇ ಇಸವಿ ಮಾರ್ಚಿ ತಿಂಗಳು 20ನಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ರ 1903ನೇ ಇಸವಿ ಜನವರಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣ

ಸ್ರ 1902—1903ನೇ ಇಸವಿ ಅರ್ಜೀ ನಂಬರ್ 276.

ಅರ್ಜೀದಾರ ಹೈದರಾಬಾದ್ ಸಂಸ್ಥಾನದ ರಾಯಿಚೂರಿನಲ್ಲಿರುವ ಮಹಮದ್ ಫಕ್ರೂದ್ದೀ ಸಾಬರ ಮಗ ಗುಲ
ಮೈನರಾದ ಶ್ರೀರಂಗಪಟ್ಟಣದ ಸ್ಥಳದ ಹಬೀಬುಲ್ಲಾ ಸಾಹೇಬ್ ತಾಹಿರ್ ಮಗ ಜೈನುಲ್ಲಾಬ್ದೀರ ಆಸ್ತೀ ವಿಷ

ಸದರೀ ಮೈನರಾದ ಜೈನುಲ್ಲಾಬ್ದೀರಿಗೆ ಹಿತಚಿಂತಕನು ಆಗಬೇಕೆಂಬ ಹಕ್ಕಿನ ಮೇಲೆ ರಾಯಿಚೂರು
ಹದೀಸಾಬ್ ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.
ರಿಂಗ್ ಬಗ್ಯೆ ಸ್ರ 1903ನೇ ಇಸವಿ ಮಾರ್ಚಿ ತಾರೀಖು 20ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನ

ಸ್ರ 1903ನೇ ಇಸವಿ ಫೆಬ್ರವರಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್
ಣಾಗಿದೆ.

ಎಂ. ರಾ